# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 642/2018

| | | |
|---|---|---|
| ಸಾಕ್ಷಿಯ ಹೆಸರು | ಃ ಸೋಮಶೇಖರ್ ಡಿ. | ಸಿ.ಡಬ್ಲ್ಯೂ ಃ 05 |
| ತಂದೆ ಹೆಸರು | ಃ ಲೇಟ್ ದ್ಯಾವಯ್ಯ | ಪಿ.ಡಬ್ಲ್ಯೂ ಃ 03 |
| ವಯಸ್ಸು | ಃ 54 ವರ್ಷ | ಪ್ರಮಾಣೀಕರಿಸಿದ ದಿಃ 29/04/2024 |
| ವೃತ್ತಿ | ಃ ಉಪ ತಹಶೀಲ್ದಾರ್ | |
| ವಾಸ | ಃ ಹೊಳೆನರಸೀಪುರ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು ಡಿಸೆಂಬರ್ 2015 ರಿಂದ ಮೇ 2018 ರವರೆಗೆ ಹೊಳೆನರಸೀಪುರದ ತಹಶೀಲ್ದಾರು ಕಚೇರಿಯಲ್ಲಿ ಉಪತಹಶೀಲ್ದಾರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ 01.04.2016 ರಲ್ಲಿ ಸೀಗರನಹಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನದ ಜಾತ್ರೆಯ ಸಂಬಂಧ ಬಳಿ ನನಗೆ ಕರ್ತವ್ಯವನ್ನು ನೇಮಿಸಿದ್ದರು, ಅದರಂತೆ ದಿನಾಂಕಃ 02.04.2016 ರಂದು ಹರಿಹರಪುರದ ಜಾತ್ರೆ ಇತ್ತು, ಅಲ್ಲಿಗೆ ನಾನು ಹಾಗೂ ನನ್ನ ವಿ.ಎ. ಕರ್ತವ್ಯಕ್ಕೆ ನೇಮಿಸಲಾಯಿತು ಅದರಂತೆ ನಾನು ಹೋಗಿದ್ದೆ, ಅದೇ ದಿನ ದೇವಸ್ಥಾನದ ಪೂಜೆಯ ಬಗ್ಗೆ ಚರ್ಚಿಸಲು ಎ.ಸಿ. ಮತ್ತು ತಹಶೀಲ್ದಾರವರು ಸಭೆ ಸೇರಿದ್ದರು. ಆ ಸಂದರ್ಭದಲ್ಲಿ ಗ್ರಾಮದಲ್ಲಿ ಕೆಲವರು ಎ.ಸಿ.ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ದೇವಸ್ಥಾನದ ಪೂಜೆ ಮಾಡುವ ವಿಚಾರದಲ್ಲಿ ಗ್ರಾಮಸ್ಥರು ಮತ್ತು ಎ.ಸಿ., ತಹಶೀಲ್ದಾರವರಿಗೆ ವಾಗ್ವಾದ ಆಗಿರುತ್ತದೆ. ಆ ಸಂದರ್ಭದಲ್ಲಿ ಗ್ರಾಮಸ್ಥರು ಶಾಲಾ ಆವರಣದಲ್ಲಿ ಚರ್ಚೆ ಮಾಡುತ್ತಿದ್ದ ನಮಗೆಲ್ಲಾರಿಗೂ ಕಲ್ಲುಗಳನ್ನು ತೂರಾಡಿರುತ್ತಾರೆ. ನಮ್ಮ ಇಲಾಖೆಯ ಜೀಪ್ ಚಾಲಕ ಗಲಾಟೆಯ ಬಗ್ಗೆ ಐ-ಪ್ಯಾಡ್ ನಲ್ಲಿ ವಿಡಿಯೋ ಚಿತ್ರೀಕರಣ ಮಾಡುತ್ತಿದ್ದರು, ಅದೇ ಸಂದರ್ಭದಲ್ಲಿ ಸದರಿ ಐ-ಪ್ಯಾಡ್ ಅನ್ನು ಕೆಳಗೆ ಇಟ್ಟು ಜಖಂಗೊಳಿಸಿರುತ್ತಾರೆ. ನಂತರ ಸದರಿ ಜೀಪ್ ನ ಚಾಲಕನಿಗೆ ಕೈಯಿಂದ ಹೊಡೆದಿರುತ್ತಾರೆ. ಆ ಸಂದರ್ಭದಲ್ಲಿ ಗ್ರಾಮಸ್ಥರು ಶಾಲೆಯ ಕೊಠಡಿಯೊಳಗೆ ಎ.ಸಿ. ಮತ್ತು ತಹಶೀಲ್ದಾರವರನ್ನು ಬಾಗಿಲು ಹಾಕಿ ಕೂಡಿಹಾಕಿರುತ್ತಾರೆ. ತಹಶೀಲ್ದಾರವರ ಮೇಲೆಯೂ ಸಹ ಕಲ್ಲುತೂರಾಟ ನಡೆಸಿರುತ್ತಾರೆ.

ನಂತರ ಪೋಲೀಸರು ಘಟನ ಸ್ಥಳದಲ್ಲಿ ಅಲ್ಲಿದ ಜನರನ್ನು ಚದುರಿಸಿರುತ್ತಾರೆ. ಆ ಸಂದರ್ಭದಲ್ಲಿ ಕಲ್ಲನ್ನು ತೂರಾಡಿದವರನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇದ್ದ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ನಂತರ ಸಂಜೆಯ ಸಮಯದಲ್ಲಿ ಗಲಾಟೆಯು ಮುಗಿದಿರುತ್ತದೆ. ಅದೇ ರೀತಿ ಎಲ್ಲಾರಿಗೂ ಮರದ ಕೆಳಗಡೆ ಪೂಜೆ ಮಾಡಲು ಅವಕಾಶ ಮಾಡಿಕೊಡಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ಅಲ್ಲಿದ ಜನರು ಕೈಯಿಂದ ಮಾರಕಅಸ್ತ್ರಗಳಾದ ಕಲ್ಲು ಅನ್ನು ಹಿಡಿದುಕೊಂಡು ಅಕ್ರಮ ಕೂಟ ಕಟ್ಟಿಕೊಂಡು ನಮ್ಮ ಇಲಾಖೆ ಹಾಗೂ ಪೋಲೀಸ್ ಇಲಾಖೆಯವರಿಗೆ ಕಲ್ಲಿನಿಂದ ತೂರಿರುತ್ತಾರೆ ಎಂದರೆ ಸರಿ. ಗಲಾಟೆ ಮಾಡಿದವರು ತಂಗ್ಯಮ್ಮ, ಮಂಜೇಗೌಡ, ಕೃಷ್ಣೇಗೌಡ, ಇನ್ನೂ 5-6 ಜನರು ಗಲಾಟೆಯನ್ನು ಮಾಡಿರುತ್ತಾರೆ. ಆರೋಪಿಗಳು ಹಾಳು ಮಾಡಿದ ಐ-ಪ್ಯಾಡ್ ಬೆಲೆಯು ಸುಮಾರು 25-30 ಸಾವಿರ ಬೆಲೆಯುಳ್ಳದಾಗಿರುತ್ತದೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಡಿ.ಬಿ.ಡಿ. ವಕೀಲರಿಂದಃ

ನಾವು ದಿನಾಂಕಃ 01.04.2016 ರಂದು ಪೂರ್ವಭಾವಿ ಸಭೆಯನ್ನು ಸೇರಿದ್ದೇವು. ಜಾತ್ರೆಯು ದಿನಾಂಕಃ 01.04.2016 ಹಾಗೂ 02.04.2016 ರಂದು ನಡೆದಿರುತ್ತದೆ. ಸದರಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಸುಮಾರು 07 ಹಳ್ಳಿಗಳಲ್ಲಿ ಜಾತ್ರೆ ನಡೆಯುತ್ತದೆ. ಅವುಗಳೆಂದರೆ ಸಿಗರನಹಳ್ಳಿ, ಹರಿಹರಪುರ, ಹರೇಕಲ್ಲು ಹೊಸಹಳ್ಳಿ ಹಾಗೂ ಇತರೆ ಗ್ರಾಮಗಳಾಗಿರುತ್ತವೆ. ಆ ದಿನ ನಮಗೆ ತಹಶೀಲ್ದಾರವರು ಮೌಖಿಕ ಆದೇಶವನ್ನು ಮಾಡಿರುತ್ತಾರೆ. ಸದರಿ ಜಾತ್ರೆ ನಡೆಯುವ ಸ್ಥಳಕ್ಕೆ ಸುತ್ತ ಪೋಲೀಸ್ ಬಂದುಬಸ್ತು ಮಾಡಿತ್ತು ಎಂದರೆ ಸರಿ. ನಾನು ಸ್ಥಳದಲ್ಲಿ ದಿನಾಂಕಃ 01.04.2016 ಹಾಗೂ ದಿನಾಂಕಃ 02.04.2016 ರಂದು ಇದ್ದೆ. ಗಲಾಟೆ ನಡೆದ ಸ್ಥಳದಲ್ಲಿ ಸುಮಾರು 1000 ರಿಂದ 2000 ಜನರು ಸೇರಿದ್ದರು. ಗಲಾಟೆಯ ದಿನ ನಾನು ಶಾಲೆಯ ಹೊರಗಡೆ ಇದ್ದೆ. ಸದರಿ ಕೃತ್ಯವು ಶಾಲೆಯಿಂದ ಸುಮಾರು 25-50 ಮೀಟರ್ ಅಂತರದಲ್ಲಿ ನಡೆದಿರುತ್ತದೆ. ನಾನು ದೂರದಲ್ಲಿ ಇದ್ದುದ್ದರಿಂದ ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ಮಾಡುವಾಗಾ ಸುಮಾರು 100-200 ಜನರು ಹಾಜರಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಸೀಗರನಹಳ್ಳಿ ಗ್ರಾಮಕ್ಕೆ ಸೇರಿದ್ದವರು. ಆರೋಪಿಗಳು ಆ ದಿನ ಸ್ಥಳದಲ್ಲಿ ಇರಲಿಲ್ಲ ಮತ್ತು ಗಲಾಟೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗಳು ನಮ್ಮ ಮೇಲೆ ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಜೀಪ್ ಚಾಲಕ ಯಾವುದೇ ಐ-ಪ್ಯಾಡ್ ಅನ್ನು ಸ್ಥಳಕ್ಕೆ ತಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಆಸ್ಪತ್ರೆಗೆ ಹೋಗಿರಲಿಲ್ಲ. ಅದೇ ರೀತಿ ನಮ್ಮ ತಹಶೀಲ್ದಾರವರಾಗಲೀ ಅಥವಾ ಎ.ಸಿ.ರವರು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಗೆ ಹಾಜರಾಗಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಯಾವುದೇ ತೊಂದರೆ ಕೊಡದೇ ಇದ್ದರೂ ಅವರಿಗೆ ತೊಂದರೆ ಕೊಡಲೆಂದು ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ಸಮಯ ಹಾಗೂ ದಿನಾಂಕದಂದು ಸಿಗರನಹಳ್ಳಿ ಗ್ರಾಮಸ್ಥರ ಮೇಲೆ 4-5 ಪ್ರಕರಣಗಳು ದಾಖಲಾದವು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ